# CCE RR

**ಸಂಕೇತ ಸಂಖ್ಯೆ : 62-K** **ವಿಷಯ : ತೃತೀಯ ಭಾಷೆ — ಕನ್ನಡ**

**Code No. : 62-K** **Subject : Third Language — KANNADA**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರು ಪುಸ್ತಕವು ಮೂರು ವಿಭಾಗಗಳನ್ನು ಹೊಂದಿದೆ.

ii) **ವಿಭಾಗ 'ಎ'**ಯಲ್ಲಿ ಗದ್ಯ, ಪದ್ಯ ಮತ್ತು ಪೋಷಕ ಅಧ್ಯಯನಗಳ 53 ಅಂಕಗಳ ಒಟ್ಟಾರೆ 27 ಪ್ರಶ್ನೆಗಳಿವೆ.

iii) **ವಿಭಾಗ 'ಬಿ'**ಯಲ್ಲಿ ಆನ್ವಯಿಕ ವ್ಯಾಕರಣ, ಅಲಂಕಾರ ಮತ್ತು ಛಂದಸ್ಸುಗಳ 12 ಅಂಕಗಳ ಒಟ್ಟಾರೆ 12 ಪ್ರಶ್ನೆಗಳಿವೆ.

iv) **ವಿಭಾಗ 'ಸಿ'**ಯಲ್ಲಿ ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲಗಳ 15 ಅಂಕಗಳ ಒಟ್ಟಾರೆ 7 ಪ್ರಶ್ನೆಗಳಿವೆ.

v) ಸೂಚನೆಗೆ ಅನುಸಾರ ಪ್ರತಿ ಪ್ರಶ್ನೆಗೂ ಉತ್ತರವನ್ನು, ಉತ್ತರಕ್ಕಾಗಿ ಮೀಸಲಿಟ್ಟ ಆಯಾ ಜಾಗದಲ್ಲೇ ಬರೆಯಬೇಕು.

vi) ಛಂದಸ್ಸನ್ನು ಹೊರತುಪಡಿಸಿ ಉಳಿದೆಲ್ಲೂ ಸೀಸದ ಕಡ್ಡಿ (ಪೆನ್ಸಿಲ್) ಯಲ್ಲಿ ಉತ್ತರ ಬರೆಯುವಂತಿಲ. ಹಾಗೇನಾದರೂ ಬರೆದರೆ ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

vii) ಉತ್ತರಗಳು ನೇರವೂ, ಸ್ಪಷ್ಟವೂ ಆಗಿರಲಿ.

viii) ಪ್ರಶ್ನೆ ಪತ್ರಿಕೆಯನ್ನು ಓದಿ ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ix) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

ಈ ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : 10 × 1 = 10

1. ಅನಿಲ್ ಕುಂಬ್ಳೆಯವರು ನಿವೃತ್ತಿಯ ನಂತರವೂ ಕ್ರಿಕೆಟ್ ಸಂಪರ್ಕವನ್ನು ಹೇಗೆ ಉಳಿಸಿಕೊಂಡಿದ್ದಾರೆ ?

2. ಅನಿಲ್ ಕುಂಬ್ಳೆಯವರು ವಿದ್ಯಾಭ್ಯಾಸದಲ್ಲಿ ಪಡೆದ ಉನ್ನತ ಪದವಿ ಯಾವುದು ?

3. 1942 ರಲ್ಲಿ ಮೋಹನಪುರದವರು ಭಾಗವಹಿಸಿದ ಚಳುವಳಿ ಯಾವುದು ?

4. ಕಸ್ತೂರಿಯವರು ಯಾವ ಕ್ಷೇತ್ರದಲ್ಲಿ ಮರೆಯಲಾಗದ ಹೆಸರು ಮಾಡಿದ್ದಾರೆ ?

5. ಕಸ್ತೂರಿಯವರು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸಿದ್ದು ಹೇಗೆ ?

6. ಯಾರು ಯಾರಲ್ಲಿ ಹರಿಯುವ ನೆತ್ತರು ಒಂದೇ ಎಂದು ನಿಸಾರ್ ಅಹಮದ್‌ರವರು ಹೇಳಿದ್ದಾರೆ ?

7. ದೇಶದ ಪ್ರಗತಿಯು ನಮ್ಮಿಂದ ಯಾವಾಗ ಸಾಧ್ಯವಾಗುತ್ತದೆ ಎಂದು ಬಿ.ಆರ್. ಲಕ್ಷ್ಮಣರಾವ್ ಅವರು ಹೇಳಿದ್ದಾರೆ ?

8. ಉಣಲಾದ ನಂತರ ಯಾವ ಚಿಂತೆ ಎಂದು ಅಂಬಿಗರ ಚೌಡಯ್ಯನವರು ಹೇಳಿದ್ದಾರೆ ?

9. ಧರ್ಮಪದನು ಕೊನಾರ್ಕ್‌ಗೆ ಬರಲು ಕಾರಣವೇನು ?

10. ಯಾರು ಮಂತ್ರಿಯಾಗಬೇಕೆಂದು ಕವಿ ಪುಲಿಗೆರೆ ಸೋಮನು ಹೇಳಿದ್ದಾನೆ ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು–ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

11. ಅನಿಲ್ ಕುಂಬ್ಳೆಯವರ ಬಾಲ್ಯಜೀವನವನ್ನು ತಿಳಿಸಿ.

12. ಕುಲಕರ್ಣಿಯು ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆಯಬೇಡಿರಿ ಎಂದು ಸೋಮಣ್ಣನಿಗೆ ಏಕೆ ಹೇಳಿದನು ?

13. ತುಳಜಾಬಾಯಿ ಧ್ವಜವನ್ನು ಹಿಡಿದು ಬರಲು ಕಾರಣವೇನು ?

14. ಮೊಗಲರ ಸೈನ್ಯವು ಪಲಾಯನಗೈಯುವಂತೆ ಮಾಡಲು ಕೆಳದಿಯ ಚೆನ್ನಮ್ಮ ಮಾಡಿದ ಉಪಾಯವನ್ನು ವಿವರಿಸಿ.

15. ಕಸ್ತೂರಿಯವರು ತಮ್ಮ ಸ್ನೇಹಿತರಿಗೆ ತಿಳಿಸಿದ 'ಸಂಕಟದ ವಿಷಯ' ಯಾವುದು ?

16. ಮನಸ್ಸನ್ನು ಶೋಧಿಸುವ ವಿಧಾನಗಳಲ್ಲಿ ಪುರಂದರದಾಸರ ಅಭಿಪ್ರಾಯಗಳೇನು ?

17. ಒಂದೇ ಗೇಣಿನ ಅಂತರದಲ್ಲಿ ಮುಕ್ತಿಯನ್ನು ಪಡೆಯುವುದು ಹೇಗೆಂದು ಪುರಂದರದಾಸರು ಹೇಳಿದ್ದಾರೆ ?

18. ಜನಪದರು ದನಕರುಗಳ ಸ್ಥಿತಿಯನ್ನು ಮಳೆರಾಯನಲ್ಲಿ ಹೇಗೆ ನಿವೇದಿಸಿದ್ದಾರೆ ?

19. ಸ್ವಾತಿ ಮಳೆಯ ಮಹತ್ವವನ್ನು 'ಜಾನಪದ' ಪದ್ಯದಲ್ಲಿ ಹೇಗೆ ವರ್ಣಿಸಿದ್ದಾರೆ ?

20. ವಿದ್ಯುತ್ ತಂತಿಗಳು ತಲೆಯ ಹತ್ತಿರದಲ್ಲೇ ಹಾದು ಹೋದಾಗ ಈರಪ್ಪ ಎಂ. ಕಂಬಳಿ ಅವರಿಗೆ ಆದ ಅನುಭವಗಳಾವುವು ?

21. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : $1 \times 3 = 3$

ಅಕ್ಷರವೆಂಬುದು ____________________

____________________

____________________

____________________ಹೊಸ ರೂಪ.

*ಅಥವಾ*

ದೀಪ ಉಜ್ಜಿದರೆ ____________________

____________________

____________________

____________________ಸಮಸ್ತ.

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ವಿಸ್ತರಿಸಿ ಬರೆಯಿರಿ : $2 \times 3 = 6$

22. "ಕೇಡಾದರೆ ಮರಣದ ಚಿಂತೆ"

23. "ತಾಯಿ ಎಂದು ಕರೆದ ಕನ್ನಡ ಕಂದ ಯಾರು ?"

ಈ ಕೆಳಗಿನ ಸಾಹಿತಿಗಳ ಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : $2 \times 3 = 6$

24. ಜಿ.ಪಿ. ರಾಜರತ್ನಂ

25. ಕೆ.ಎಸ್. ನಿಸಾರ್ ಅಹಮದ್

ಈ ಕೆಳಗಿನ ಪ್ರಶ್ನೆಗಳಿಗೆ **ಎಂಟು–ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

26. ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಿನಿಪೊಲೀಸ್ ನಗರದಲ್ಲಿ ಎದುರಿಸಿದ ಸಮಸ್ಯೆಗಳನ್ನು ವಿವರಿಸಿ.

*ಅಥವಾ*

ಗೊರೂರರ ಸಮಸ್ಯೆಯನ್ನು ಟ್ರಾಫಿಕ್ ಪೊಲೀಸರು ಹೇಗೆ ಬಗೆಹರಿಸಿದರು ? ವಿವರಿಸಿ.

27. 'ಕೋಗಿಲೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿ.

*ಅಥವಾ*

ಕೋಗಿಲೆಯನ್ನು ಕುರಿತು ಚೆನ್ನವೀರ ಕಣವಿಯವರು ಹೇಳಿರುವ ವಿಷಯಗಳನ್ನು ಸಂಗ್ರಹಿಸಿ ಬರೆಯಿರಿ.

## ವಿಭಾಗ – 'ಬಿ'
## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $12 \times 1 = 12$

28. ಈ ಕೆಳಗಿನವುಗಳಲ್ಲಿ ಅನುನಾಸಿಕಾಕ್ಷರಗಳು ಇವು

(ಎ) ಅ, ಏ, ಓ, ಔ (ಬಿ) ಕ, ಚ, ಟ, ತ, ಪ

(ಸಿ) ಘ, ಝ, ಢ, ಧ, ಭ (ಡಿ) ಙ, ಞ, ಣ, ನ, ಮ

29. ಹತ್ತನೆಯ ತರಗತಿಯಲ್ಲಿ ಓದುತಿರುವ ರಾಹುಲ್ ಒಳ್ಳೆಯ ವಿದ್ಯಾರ್ಥಿ. ಇಲ್ಲಿರುವ ಸಂಖ್ಯೇಯ ವಾಚಕ ಪದ.

(ಎ) ರಾಹುಲ್ (ಬಿ) ಒಳ್ಳೆಯ

(ಸಿ) ವಿದ್ಯಾರ್ಥಿ (ಡಿ) ಹತ್ತನೆಯ

30. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ

(ಎ) ನಾನು (ಬಿ) ತಾನು

(ಸಿ) ನಾವು (ಡಿ) ನೀನು

31. 'ನಾಕ' ಪದದ ಅರ್ಥ

(ಎ) ನರಕ (ಬಿ) ಸ್ವರ್ಗ

(ಸಿ) ನಾಯಕ (ಡಿ) ಮಾರ್ಗ

32. ರಾಷ್ಟ್ರಕೂಟರ ಆಸ್ಥಾನದಲ್ಲಿದ್ದ ಕವಿಯು 'ಕವಿರಾಜಮಾರ್ಗ'ವನ್ನು ರಚಿಸಿದನು. ಈ ವಾಕ್ಯದಲ್ಲಿರುವ ದ್ವಿತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ

(ಎ) ರಾಷ್ಟ್ರಕೂಟ (ಬಿ) ಆಸ್ಥಾನದಲ್ಲಿ

(ಸಿ) ಕವಿರಾಜಮಾರ್ಗವನ್ನು (ಡಿ) ಕವಿಯ

33. ಸುರೇಂದ್ರ – ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

(ಸಿ) ವೃದ್ಧಿ ಸಂಧಿ (ಡಿ) ಆದೇಶ ಸಂಧಿ

34. ಕ್ರಿಯಾ ಪದದ ಮೂಲರೂಪ

(ಎ) ಧಾತು (ಬಿ) ಪ್ರಾತಿಪದಿಕ

(ಸಿ) ನಾಮ ಪ್ರಕೃತಿ (ಡಿ) ಪ್ರತ್ಯಯ

35. ಕೆಳಗಿನವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆ

(ಎ) ಹಣ್ಣ ಹಂಪಲು (ಬಿ) ನಡೆನಡೆ

(ಸಿ) ಕಪ್ಪಕಾಣಿಕೆ (ಡಿ) ಪಟಪಟ

36. ಇರುಳು ಪದದ ವಿರುದ್ಧಾರ್ಥಕ ರೂಪ

(ಎ) ಅರಳು (ಬಿ) ಹೆಗಲು

(ಸಿ) ಹಗಲು (ಡಿ) ಮರುಳು

37. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು

(ಎ) ಸಾಮಾನ್ಯ ವಾಕ್ಯ (ಬಿ) ಸರಳ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಮಿಶ್ರ ವಾಕ್ಯ

38. 'ಮುಕ್ಕಣ್ಣು' – ಈ ಸಮಾಸಕ್ಕೆ ಉದಾಹರಣೆ

(ಎ) ಕರ್ಮಧಾರಯ (ಬಿ) ದ್ವಿಗು

(ಸಿ) ಗಮಕ (ಡಿ) ದ್ವಂದ್ವ

39. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ಅರ್ಧ ವಿರಾಮ

(ಸಿ) ಅಲ್ಪ ವಿರಾಮ (ಡಿ) ಆವರಣ

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

$4 \times 1 = 4$

ಪುಟ್ಟದ್ವೀಪ ರಾಮೇಶ್ವರದಲ್ಲಿ ಜನಿಸಿದ ಅಬ್ದುಲ್ ಕಲಾಂ ತಮ್ಮ ಕಾಯಕ ನಿಷ್ಠೆಯಿಂದ ವಿಶ್ವವಿಖ್ಯಾತರಾದರು. ಬಾಲಕ ಅಬ್ದುಲ್ ಕಲಾಂ ತಮ್ಮ ತಂದೆಗೆ ಆರ್ಥಿಕವಾಗಿ ನೆರವಾಗಲು ಅಣ್ಣ ಸಂಸೂದ್ದಿನ್ ಕಲಾಂ ಜೊತೆಗೆ ಪ್ರತಿದಿನ ವೃತ್ತಪತ್ರಿಕೆಗಳನ್ನು ವಿತರಣೆ ಮಾಡುತ್ತಿದ್ದರು. ಶಾಲೆಯಲ್ಲಿ ಓದುತ್ತಿದ್ದಾಗ ಅಬ್ದುಲ್ ಕಲಾಂ ಒಬ್ಬ ಸಾಧಾರಣ ವಿದ್ಯಾರ್ಥಿಯಾಗಿದ್ದರೂ, ಚುರುಕಾದ ಮತ್ತು ಕಠಿಣ ಶ್ರಮಪಡುವ ವಿದ್ಯಾರ್ಥಿಯಾಗಿದ್ದರು. ಅವರಿಗೆ ಗಣಿತದಲ್ಲಿ ವಿಶೇಷ ಆಸಕ್ತಿ ಇತ್ತು. ಪ್ರತಿದಿನ 4 ಗಂಟೆಗೆ ಎದ್ದು ದಿನದ ಪಾಠವನ್ನು ತಪ್ಪದೆ ಓದುತ್ತಿದ್ದರು.

ಬಾಲ್ಯದಿಂದಲೇ ಕರ್ಮಯೋಗಿಯಾಗಿದ್ದ ಅಬ್ದುಲ್ ಕಲಾಂ, ಸುಭದ್ರ ಭಾರತದ ಕನಸು ಕಂಡು ಅದರ ನಿರ್ಮಾಣಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಅವರ ಅನುಭವದ ವಿವೇಕಯುಕ್ತ ನುಡಿಗಳು ನಮ್ಮ ಜೀವನಕ್ಕೆ ಮಾರ್ಗದರ್ಶನ ನೀಡುತ್ತಿವೆ.

*ಪ್ರಶ್ನೆಗಳು :*

40. ಬಾಲಕ ಅಬ್ದುಲ್ ಕಲಾಂ ತಮ್ಮ ತಂದೆಗೆ ಆರ್ಥಿಕವಾಗಿ ಹೇಗೆ ನೆರವಾದರು ?

41. ಅಬ್ದುಲ್ ಕಲಾಂ ವಿಶ್ವವಿಖ್ಯಾತರಾಗಲು ಪ್ರಮುಖ ಕಾರಣವೇನು ?

42. ಬಾಲಕ ಅಬ್ದುಲ್ ಕಲಾಂರವರಿಗೆ ಯಾವ ವಿಷಯದಲ್ಲಿ ಆಸಕ್ತಿ ಇತ್ತು ?

43. ಅಬ್ದುಲ್ ಕಲಾಂ ತಮ್ಮ ಜೀವನವನ್ನು ಯಾವುದಕ್ಕೆ ಮುಡುಪಾಗಿಟ್ಟರು ?

44. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : $1 \times 3 = 3$

* ಒಗ್ಗಟ್ಟಿನಲ್ಲಿ ಬಲವಿದೆ
* ಚಿಂತೆಯೇ ಮುಪ್ಪು; ಸಂತೋಷವೇ ಯೌವನ
* ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ

45. ನಿಮ್ಮನ್ನು ಗದಗ ಜಿಲ್ಲೆಯ ಹೊಂಬಳದಲ್ಲಿರುವ ಸರ್ಕಾರಿ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿ 'ಕರೀಮ್' ಎಂದು ಭಾವಿಸಿಕೊಂಡು, ಕೊಪ್ಪಳ ಜಿಲ್ಲೆಯ ಯಲಬುರ್ಗಿಯಲ್ಲಿ ವಾಸವಾಗಿರುವ ನಿಮ್ಮ ತಂದೆ ರಹಮತ್ ಹುಸೇನ್‌ರವರಿಗೆ ಶಾಲೆಯಲ್ಲಿ ಕೈಗೊಂಡಿರುವ ಶೈಕ್ಷಣಿಕ ಪ್ರವಾಸಕ್ಕೆ ಹಣವನ್ನು ಕಳುಹಿಸುವಂತೆ ಕೋರಿ ಒಂದು ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಚಿಕ್ಕಮಗಳೂರು ಜಿಲ್ಲೆಯ ಕಡೂರಿನಲ್ಲಿರುವ ಶ್ರೀ ಮರುಳುಸಿದ್ಧೇಶ್ವರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ನಾಗೇಶ್' ಎಂದು ಭಾವಿಸಿಕೊಂಡು, ಸೂಕ್ತ ಕಾರಣ ನೀಡಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ರಜಾಪತ್ರ ಬರೆಯಿರಿ.

46. ಈ ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : $1 \times 4 = 4$

* ನೆರೆಯ ಹಾವಳಿಯಿಂದಾಗುವ ಅನಾಹುತಗಳು
* ನನ್ನ ಮೆಚ್ಚಿನ ಕ್ರೀಡೆ
* ಗ್ರಂಥಾಲಯದ ಮಹತ್ವ